(ಈ) ಬೆಳಗಾವಿ ಮಹಾನಗರ ಪಾಲಿಕೆಯ ಹಾಗೂ ಅನೇಕ ಸ್ಥಳೀಯ ಸಂಸ್ಥೆಗಳಿಗೆ ಎಂಇಎಸ್ ಸದಸ್ಯರನ್ನೂ ಸರ್ಕಾರ ನಾಮಕರಣ ಮಾಡುತ್ತಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಬಹಳ ಪ್ರಾಮುಖ್ಯವಾದ ವಿಚಾರ, ಬೆಳಗಾವಿ ನಗರಮಹಾಪಾಲಿಕೆಯುಸೇರಿದಂತೆ ಇನ್ನೂ ಅನೇಕ ಸ್ಥಳೀಯ ಸಂಸ್ಥೆಗಳಿಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರನ್ನು ಸರ್ಕಾರದವರು ನಾಮಕರಣ ಮಾಡುತ್ತಿದ್ದಾರೆ. ಯವ ಉದ್ದೇಶಕ್ಕೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಕನ್ನಡಿಗರನ್ನು ಸಂಪೂರ್ಣವಾಗಿ ಕಡೆಗಾಣಿಸಿ ಅಲ್ಲಿಯ ಸ್ಥಳೀಯಸಂಸ್ಥೆಗಳಿಗೆ ಮರಾಠರನ್ನು ನೇಮಕ ಮಾಡಿರುವಂಥಾದ್ದು ಅತ್ಯಂತ ಅಪಾಯಕಾರಿ ಬೆಳವಣಿಗೆಗೆ ಮತ್ತು ಆ ಗಡಿ ಸಮಸ್ಯೆಗೆ ಇವರೇ ಮತ್ತೆ ಮತ್ತೆ ಚಾಲನೆ ಕೊಟ್ಟಂತಾಗುತ್ತದೆ. ಇದು ಒಳ್ಳೆಯ ಸೂಚನೆಯಲ್ಲ. ಇದಲ್ಲದೆ ಮಹಾರಾಷ್ಟ್ರದ ಏಕೀಕರಣದ ಧ್ವಜ ಅಲ್ಲಿ ನಗರಸಭೆಗಳ ಮೇಲೆ ಹಾರಾಡುತ್ತಿವೆ, ಇದರ ಬಗ್ಗೆ ನಾವು ಅನೇಕ ಬಾರಿ ಒತ್ತಾಯ ಮಾಡಿದ್ದೇವೆ. ಇದರ ಬಗ್ಗಯೂ ಸರ್ಕಾರ ಮವನವಾಗಿ ಕುಳಿತಿದೆ. ಇದಲ್ಲದೆ ಆ ಗಡಿಪ್ರದೇಶದ ಗ್ರಾಮಗಳಲ್ಲಿ ಕನ್ನಡವನ್ನೆಲ್ಲಾ ತೆಗೆದುಹಾಕಿ ಮರಾಠಿಭಾಷೆಯಲ್ಲಿರುವ ನಾಮಕಫಲಕಗಳನ್ನು ಹಾಕುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಮಹಾರಾಷ್ಟ್ರ ಏಕೀಕರಣದ ಸಮಿತಿಯ ನಾಮಕರಣವನ್ನು ರದ್ದುಮಡಬೇಕು. ಮತ್ತು ಅಲ್ಲಿ ಹಾಕಿರುವ ಎಂ.ಇ.ಎಸ್. ಬಾವುಟವನ್ನು ತವಗೆಯಬೇಕು, ಎಲ್ಲಿ ಮರಾಠಿ ನಾಮಫಲಕಗಳಿವೆ ಅದನ್ನು ತೆಗೆದು ಸಂಪೂರ್ಣವಾಗಿ ಕನ್ನಡದಲ್ಲಿ ನಾಮಫಲಕವನ್ನು ಹಾಕಬೇಕು., ಇದರ ಬಗ್ಗೆ ಸರ್ಕಾರ ಸ್ಪಷ್ಟವಾದಂಥ ನಿಲುವನ್ನು ಹೇಳಬೇಕು.

ಅಧ್ಯಕ್ಷರು: ದಯಮಾಡಿ, ಅವರು ಸೂಚನೆಯೊಂದನ್ನು ಕೊಟ್ಟಿದ್ದಾರೆ, ತಾವು ಕೊಟ್ಟಿಲ್ಲ, ತಾವು ಕುಳಿತುಕೊಳ್ಳಬೇಕು. ತಾವು ನೋಟಿಸ್ ಕಳುಹಿಸಿ, ಆಗ ಬೇರೆ ಸೂಚನೆಯಲ್ಲಿ ನಿಮಗೆ ನಾನು ಕಳುಹಿಸುತ್ತೇನೆ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಮಾತನಾಡಿ, . ದಯಮಾಡಿ ಕುಳಿತುಕೊಳ್ಳಬೇಕು. ನೋ, ನೋ, ಅವರು ಪ್ರಸ್ತಾಪವನ್ನು ತ್ತಿದ್ದಾರೆ, ಅದಕ್ಕೆ ಅವರು ಉತ್ತರವನ್ನು ಕೊಡುತ್ತಾರೆ, ನೀವು ದಯಮಾಡಿ ಕುಳಿತುಕೊಳ್ಳಿ. ನೀವು ಒಂದು ನೋಟಿಸ್ ಕೊಡಿ ಆಗ ನಿಮಗೂ ಅವಕಾಶವನ್ನು ಕೊಡುತ್ತೇನೆ. ನೋಡಿ, ಸರ್ಕಾರ ಉತ್ತರ ಕೊಡಲಿಕ್ಕಿದೆ, ನೀವಲ್ಲ, ಕುಳಿತುಕೊಳ್ಳಿ,

ಮಾನ್ಯ ಸದಸ್ಯರೊಬ್ಬರು: ಕನ್ನಡದಲ್ಲಿ ಮಾತನಾಡಿ.

ಅಧ್ಯಕ್ಷರು: ನಿವೇನಾದರೂ ಮಾತನಾಡುವುದಿದ್ದರೆ ಒಂದು ನೋಟೀಸ್ ಕೊಡಿ.

Sri. Manohar Kallappa Kinekar: What is this Sir? He is alleging against Maharashtra Eddikarana Samithi. You are not allowing me to give my opinion.

MR. SPEAKER: It is for the Government.

MR. M.P.PRAKASH: During zero hour, there is no possibility...

SRI MANOHAR KALLAPPA KINEKAR: No he is alleging against Maharashtra Ekikarana Samithi.

ಶ್ರೀ ನೆ.ಲ.ನರೇಂದ್ರಬಾಬು: ಕನ್ನಡದಲ್ಲಿ ಹೇಳಿ ಸ್ವಾಮಿ, ಕನ್ನಡದಲ್ಲಿ ಹೇಳಿದರೆ ನಮಗೂ ಅರ್ಥವಾಗುತ್ತದೆ.

SRI MANOHAR KALLAPPA KINEKAR: Nominations are there. That is also according to rule.

ಅಧ್ಯಕ್ಷರು: ಕಿನೇಕರ್‌ರವರೇ, ದಯಮಾಡಿ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ನೆ.ಲ.ನರೇಂದ್ರಬಾಬು: ಇದು ಕರ್ನಾಟಕವಿದು, ನೀವು ಕನ್ನಡದಲ್ಲಿ ಮಾತನಾಡಿ, ನಮಗೆ ಅಥವಾಗುವುದು ಬೇಡವೇ? ನೀವು ಇಂಗ್ಲೀಷ್‌ನಲ್ಲಿ ಏಕೆ ಮಾತನಾಡುತ್ತಿದ್ದೀರಿ?

SRI MANOHAR KALLAPPA KINEKAR: You cannot press me like this.

ಅಧ್ಯಕ್ಷರು: ದಯಮಾಡಿ, ನರೇಂದ್ರ ಬಾಬು ನೀವ್ಯಾಕೆ ಇದರಲ್ಲಿ ಇಂಟರ್‌ಫಿಯರ್ ಆಗುತ್ತೀರಿ? ದಯಮಾಡಿ ಕುಳಿತುಕೊಳ್ಳಿ.

SRI MANOHAR KALLAPPA KINEKAR: It is the rule of Karnataka Government that Members can talk both in Kannada and English.

(ಅಡಚಣೆ)

SRI MANOHAR KALLAPPA KINEKAR: I know it very well. Don`t teach me.

ಮಾನ್ಯ ಸದಸ್ಯರೊಬ್ಬರು: ಇನ್ನೂ ಬುದ್ದಿ ಬಂದಿಲ್ಲವೇ ಇವರಿಗೆ, ಕನ್ನಡದ ನೆಲ, ಜಲ ಎಲ್ಲಾ ಬೇಕು, ಭಾಷೆ ಮಾತ್ರ ಬೇಡ ಇವರಿಗೆ,

SRI MANOHAR KALLAPPA KINEKAR: In Karnataka also, administration should run both Kannada and English. You cannot deny this. You see the rules.

ಅಧ್ಯಕ್ಷರು: ನೀವು ಮಾತನಾಡಿ.

SRI MANOHAR KALLAPPA KINEKAR: You cannot press me.

ಮಾನ್ಯ ಸದಸ್ಯರೊಬ್ಬರು: ಅವರು ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಇಷ್ಟೆಲ್ಲಾ ಮಾತನಾಡುತ್ತಿದ್ದಾರೆ ಎಂದು ಕಾಣುತ್ತದೆ. ಮರಾಠಿ ಪತ್ರಿಕೆಯಲ್ಲಿ ಈ ವಿಷಯ ಬಂದುಬಿಟ್ಟರೆ ಸಾಕು, ಅವರು

ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಪ್ರಚಾರಕ್ಕಾಗಿ ನಡೆಸುತ್ತಿರುವ ತಂತ್ರವಿದು. ಅದಕ್ಕಾಗಿ ಅವರು ಈ ರೀತಿ ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಮಾಡಿಕೊಡಬೇಡಿ. No. Don't allow him to speak. I am telling to the Speaker.

ಅಧ್ಯಕ್ಷರು: ದಯಮಾಡಿ ನೀವೆಲ್ಲಾ ಕುಳಿತುಕೊಳ್ಳಿ. ಸರ್ಕಾರದಿಂದ ಉತ್ತರ ಕೊಡುತ್ತಾರೆ.

(ಅಡಚಣೆ)

ಅಧ್ಯಕ್ಷರು: ದಯಮಾಡಿ ನೀವು ಕುಳಿತುಕೊಳ್ಳಿ, ನೀವ್ಯಾಕೆ ಹೀಗೆ ಮಧ್ಯೆ ಎದ್ದುನಿಂತು ಮಾತನಾಡುತ್ತೀರಿ? ಸರ್ಕಾರದಿಂದ ಉತ್ತರ ಕೊಡಲಿಕ್ಕೆ ಮಾನ್ಯ ಪ್ರಕಾಶ್‌ರವರು ಎದ್ದುನಿಂತಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸರ್ಕಾರಿ ಕಚೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಬಿಟ್ಟು ಬೇರೆ ಯಾವುದೇ ಧ್ವಜವನ್ನು ಹಾರಿಸಲಿಕ್ಕೆ ಅವಕಾಶವಿಲ್ಲ. ಅದು ಕಾಯ್ದೆಬಾಹಿರವಾಗಿರುವಂತಹದು ಆದ್ದರಿಂದ ಅವರು ಹೇಳುವಂಥ ಭಗವತ್ ಜಾಂಢ್ ಆಗಿರಲಿ, ಮತ್ಯಾವುದೇ ಧ್ವಜವಾಗಿರಲಿ, ಯಾರಾದರೂ ಸಹಿತ ತಮಗೆ ತಿಳಿದಂತಹ ಧ್ವಜಗಳನ್ನು ಏರಿಸಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ Flag hoist ಆಕ್ಟ್ ಎನ್ನುವುದೂ ಕೂಡ ಇದೆ. ಆ ನಿಯಮಾವಳಿಗಳನುಸಾರವಾಗಿಯೇ ನಾವು ಅದನ್ನೆಲ್ಲಾ ಪರಿಪಾಲಿಸಬೇಕಾಗುತ್ತದೆ. ಆದ್ದರಿಂದ ಅಲ್ಲಿ ಹಾಕಿರುವ ಧ್ವಜಗಳನ್ನೆಲ್ಲಾ ತೆಗೆದುಹಾಕಲಿಕ್ಕೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ನಾವು ಎಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ. ಎಂ.ಇ.ಎಸ್. ಸದಸ್ಯರನ್ನು ಸೇರಿಸಿದ್ದಾರೆ ಎನ್ನತಕ್ಕಂಥ ಮಾತುಗಳನ್ನು ಹೇಳಿದರು. ಅದನ್ನು ನಾವು ಪರಿಶೀಲಿಸಬೇಕಾಗುತ್ತದೆ. ಒಬ್ಬ ವ್ಯಕ್ತಿ ಎಂ.ಇ.ಎಸ್.ಪಕ್ಷಕ್ಕೆ ಸೇರಿರತಕ್ಕಂಥವನು ಅಥವಾ ಸಹಜವಾಗಿ ಒಬ್ಬ ಮರಾಠಿಗನಾಗಿದ್ದನೋ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ತಾವು ಹೇಳಿದಂತಹ ವಿಚಾರಗಳೇನಾದರೂ ಇದ್ದರೆ, ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಡೆಗಣಿಸುವಂತಹ ವ್ಯಕ್ತಿಗಳ್ಯಾರೂ ಕೂಡ ಸಮಿತಿಯಲ್ಲಿರಬಾರದು ಎಂಬ ನಿಮ್ಮ ಅಭಿಪ್ರಾಯಕ್ಕೆ ನಮ್ಮ ಒಪ್ಪಿಗೆಯಿದೆ. ಅದನ್ನೂ ಕೂಡ ತರಿಸಿ ಪರಿಶೀಲನೆ ಮಾಡುತ್ತೇವೆ. ಕನ್ನಡವೇ ಸಾರ್ವಭೌಮ, ಅದೇನದರೂ ಮಹಾಜನ್ ಆಯೋಗದ ಪ್ರಕಾರ ತೀರ್ಮಾನಗಳಾಗಿ ಗಡಿಗಳು ಬದಲಾವಣೆಯಾದಂಥ ಸಂದರ್ಭದಲ್ಲಿ ಏನಾದರೂ ಆಗಲಿ, ಅಲ್ಲಿಯವರೆಗೂ ಕೂಡ ಕನ್ನಡವೇ ಸಾರ್ವಭೌಮ, ಹಾಗಾಗಿ ಎಲ್ಲರೂ ಕೂಡ ಅದೇ ಪ್ರಕಾರವಾಗಿ ನಡೆದುಕೊಳ್ಳಬೇಕಾಗಿರುವ ಅಗತ್ಯತೆಯಿದೆ.

ಅಧ್ಯಕ್ಷರು: ಈಗ ಸದನವನ್ನು ಮತ್ತೆ 2.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1.46 ಗಂಟೆ ಮುಂದೂಡಲ್ಪಟ್ಟು ಪುನ: 3.00 ಗಂಟೆಗೆ ಸಮಾವೇಶಗೊಳ್ಳುವಂತೆ ನಿರ್ಣಯಿಸಿತು)

(ಸದನವು 3-18 ಘಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣ ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿಷಯ: ರಾಜ್ಯದಲ್ಲಿ ವ್ಯಾಪಿಸಿರುವ ಚಿಕುನ್‌ಗುನ್ಯಾ ರೋಗದ ಬಗ್ಗೆ ಚರ್ಚೆ.